

**ಎಲ್ಲೆಲ್ಲಿ ಅವಕಾಶವಿದೆ?**

ದಯಾಮರಣವನ್ನು ಕಾನೂನುಬದ್ಧಗೊಳಿಸಿದ ಮೊದಲ ದೇಶ ನೆದರ್ಲೆಂಡ್ಸ್. ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ, ಸ್ವಿಟ್ಜರ್ಲೆಂಡ್, ಫಿನ್ಲೆಂಡ್, ಥಾಯ್ಲೆಂಡ್, ಲಕ್ಸೆಂಬರ್ಗ್, ಆಲ್ಬೇನಿಯಾ, ಒರೆಗಾನ್, ಸ್ವೀಡನ್, ನಾರ್ವೆ, ಬೆಲ್ಜಿಯಂ, ಜರ್ಮನಿ ದೇಶಗಳಲ್ಲಿ ಈಗಾಗಲೇ ದಯಾಮರಣಕ್ಕೆ ಕಾನೂನು ಪ್ರಕಾರ ಅವಕಾಶ ಕಲ್ಪಿಸಲಾಗಿದೆ. ಬೆಲ್ಜಿಯಂನಲ್ಲಿ ಮಕ್ಕಳ ಅನಾರೋಗ್ಯದ ಸ್ಥಿತಿಗೂ ಈ ಕಾನೂನು ಅನ್ವಯ. ಆದರೆ, ಚೀನಾದಲ್ಲಿ ದಯಾಮರಣ ಕಾನೂನುಬಾಹಿರವಾಗಿದೆ.

**ದಯಾಮರಣ ಪಡೆದವರು**

ಅಮೆರಿಕದ ಕರೇನ್ ಆ್ಯನ್ ಕ್ವಿನ್ಲೆನ್, ನ್ಯಾನ್ಸಿ ಕ್ರೂಸಾನ್, ಬ್ರಿಟನ್‌ನ ಲಿಲ್ಲಿಯಾನ್ ಬಾಯ್ಸ್, ಬೆಲ್ಜಿಯಂನ ಹುಗೋ ಕ್ಲಾಸ್, ಆಸ್ಟ್ರೇಲಿಯಾದ ಕ್ರಿಸ್ಟಿಯಾನ್ ರೋಸಿಟರ್, ಫ್ರಾನ್ಸ್‌ನ ಚಾಂತಲ್ ಸೆಬಿರೆ, ಜರ್ಮನಿಯ ಎರಿಕಾ ಕ್ವೆಲ್ಮರ್, ಜಪಾನ್‌ನ ಇವಾವೋ ಫುಕುಮರು.

**ಡಾಕ್ಟರ್ ಡೆತ್!**

ಕಾನೂನಿನ ಮಾನ್ಯತೆ ಇಲ್ಲದೇ ಸುಮಾರು 130 ಜನರಿಗೆ ದಯಾಮರಣ ದಯಪಾಲಿಸಿದ ಅಮೆರಿಕದ ಅರ್ಮೇನಿಯಾದ ಡಾ. ಜಾಕ್ ಕೆವೋರ್ಕಿಯನ್ 'ಡಾಕ್ಟರ್ ಡೆತ್' ಎಂತಲೇ ಖ್ಯಾತನಾಗಿದ್ದ. ವೃತ್ತಿಯಲ್ಲಿ ಪೆಥಾಲಜಿಸ್ಟ್ ಆಗಿದ್ದ ಡಾ. ಜಾಕ್ ತನ್ನ ಬಳಿ ದಯಾಮರಣ ಕೋರಿ ಬರುತ್ತಿದ್ದವರಿಗೆ ಇಂಜೆಕ್ಷನ್ ಮೂಲಕ ಮರಣ ಕರುಣಿಸುತ್ತಿದ್ದನಂತೆ.

ಇಚ್ಛೆಯ ಉಯಿಲು, ಜೀವರಕ್ಷಕ ಔಷಧಿಗಳು, ಉಪಕರಣಗಳ ನೆರವನ್ನು ತೆಗೆಯುವುದು ಮತ್ತು ಸಂಬಂಧಿಸಿದ ಸುರಕ್ಷತಾ ಕ್ರಮಗಳ ಪಾಲನೆಯ ಅಂಶಗಳನ್ನು ಈ ತೀರ್ಪು ಹೊಂದಿದೆ.

## ಏನಿದು ದಯಾಮರಣ?

ಸಾವು ಸಹಜವಾಗಿ ಬರುವ ಮುನ್ನವೇ ಉದ್ದೇಶಪೂರ್ವಕವಾಗಿ ಮನುಷ್ಯನ ಜೀವವನ್ನು ಕೊನೆಗೊಳಿಸುವುದೇ ದಯಾಮರಣ. ಇದಕ್ಕೆ ಇಂಗ್ಲಿಷಿನಲ್ಲಿ ಯುಥನೇಸಿಯಾ, ಮರ್ಸಿ ಕಿಲ್ಲಿಂಗ್ ಅಂತಲೂ ಕರೆಯಲಾಗುತ್ತದೆ. ಯುಥನೇಸಿಯಾದಲ್ಲಿ ಆ್ಯಕ್ಟಿವ್ ಯುಥನೇಸಿಯಾ (ನೇರ ದಯಾಮರಣ) ಮತ್ತು ಪ್ಯಾಸಿವ್ ಯುಥನೇಸಿಯಾ (ಪರೋಕ್ಷ ದಯಾಮರಣ) ಎಂಬ ಎರಡು ವಿಧಗಳಿವೆ.

ನೇರ ದಯಾಮರಣವೆಂದರೆ ವ್ಯಕ್ತಿಗೆ ನೋವಿನ ಅರಿವುಂಟಾಗದಂತೆ ಸಾವನ್ನು ಕರುಣಿಸುವಂಥದ್ದು. ಅದು ಚುಚ್ಚುಮದ್ದಿನ ಮೂಲಕ ಇಥವಾ ಇತರ ಪ್ರಕ್ರಿಯೆಗಳಿಂದ ಇರಬಹುದು. (ಸದ್ಯಕ್ಕೆ ಭಾರತದಲ್ಲಿ ಇದಕ್ಕೆ ಅನುಮತಿ ನೀಡಲಾಗಿಲ್ಲ). ಪರೋಕ್ಷ ದಯಾಮರಣದಲ್ಲಿ ವ್ಯಕ್ತಿಗೆ ಅಳವಡಿಸಲಾಗಿರುವ ಜೀವರಕ್ಷಕ ಉಪಕರಣಗಳನ್ನು ತೆಗೆಯುವ ಮೂಲಕವೋ ಅಥವಾ ಔಷಧಿಗಳನ್ನು ನಿಲ್ಲಿಸುವ ಮೂಲಕವೋ ಸಾವು ಬರುವಂತೆ ಮಾಡಬಹುದು. ಆಹಾರ ಪೂರೈಸುವ ನಳಿಕೆ ಕಾರ್ಯ ನಿರ್ವಹಿಸದಂತೆ ತಡೆಯುವುದು, ಮಾರಣಾಂತಿಕ ಕಾಯಿಲೆಯಿಂದಾಗಿ ಸಾವು ನಿರೀಕ್ಷಿತವಾಗಿದ್ದು, ಆ ಸಂದರ್ಭದಲ್ಲಿ ಅಂಗಾಂಗ ವೈಫಲ್ಯವಾದರೆ, ಹೃದಯಾಘಾತವಾದರೆ ಪ್ರಾಥಮಿಕ ಚಿಕಿತ್ಸೆ ನೀಡದೇ ಸಾವು ಬರುವಂತೆ ಮಾಡುವುದು. ನೇರ ಮತ್ತು ಪರೋಕ್ಷ ದಯಾಮರಣ ಈ ಎರಡರ ಪ್ರಕ್ರಿಯೆಗಳು ಬೇರೆ ಬೇರೆಯಾಗಿದ್ದರೂ ಅಂತಿಮ ಫಲಶ್ರುತಿ ಮರಣವೇ ಆಗಿರುತ್ತದೆ.

## ಯಾರಿಗೆ ಕೊಡಬಹುದು?

ವ್ಯಕ್ತಿಯೊಬ್ಬ ಹಲವು ಕಾರಣಗಳಿಂದ ದಯಾಮರಣ ಕೋರಬಹುದು. ಹೀಗೆ ಕೋರುವವರಲ್ಲಿ ಆರೋಗ್ಯವಂತರೂ, ಅನಾರೋಗ್ಯಪೀಡಿತರೂ, ನೊಂದವರೂ, ಸಾಮಾಜಿಕ ಕಾರ್ಯಕರ್ತರು, ಅತ್ಯಾಚಾರದ ಸಂತ್ರಸ್ತೆಯರೂ ಇರಬಹುದು. ಆದರೆ, ಹೀಗೆ ಕೋರಿದವರಿಗೆಲ್ಲ ಮರಣಕ್ಕೆ